OS No. 18/2018 PW-1

ದಿನಾಂಕ 24.03.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಬಿ ಡಿ ವಕೀಲರಿಂದಃ

ನನ್ನ ತಂದೆಯ ತಂದೆಯ ಹೆಸರು ರಾಮಸಂಜೀವಯ್ಯ ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ನನ್ನ ತಂದೆಯ ತಂದೆ ಹೆಸರು ಸಂಜೀವೇಗೌಡ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸಲ್ಲಿಸಿದ ವಂಶವೃಕ್ಷದಲ್ಲಿ ನಮೂದಿಲ್ಲ ಎಂದರೆ ಸುಳ್ಳು. ನನ್ನ ತಂದೆಯ ತಂದೆ ಹೆಸರು ಸಂಜೀವೇಗೌಡ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನನ್ನ ತಂದೆಯ ಮಕ್ಕಳ ಹೆಸರು ರಾಜಮ್ಮ, ಮೃತ ಸಂಜೀವಮ್ಮ, ಮೃತ ಸಾಕಮ್ಮ, ಕೆಂಪಮ್ಮ. ಮೃತ ಸಾಕಮ್ಮ ರವರಿಗೆ ಮದುವೆಯಾಗಿರಲಿಲ್ಲ. ಅವರು ತೀರಿಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ ಬಗ್ಗೆ ಗೊತ್ತಿಲ್ಲ ಮತ್ತು ದಾವಾದಲ್ಲಿ ತಿಳಿಸಿದ ಬಗ್ಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ತಾತ ಸಂಜೀವೇಗೌಡರವರಿಗೆ ಸೇರಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ದಾವಾ ಆಸ್ತಿ 2 ಮತ್ತು 3 ನೇ ಪ್ರತಿವಾದಿಯ ತಾಯಿ ಸೇರಿದ್ದು ಎಂದರೆ ಸುಳ್ಳು. ನಿಪಿ--9 ರ ಮ್ಯೂಟೇಷನ್ ಪ್ರಕಾರ ಸಂಜೀವಮ್ಮರವರಿಗೆ ದಾವಾ ಆಸ್ತಿ ಬಂದಿದೆ ಎಂದರೆ ಸುಳ್ಳು. ಮ್ಯೂಟೇಷನ್ ನಲ್ಲಿ ಸಂಜೀವ್ ಗೌಡರವರ ಬಗ್ಗೆ ನಮೂದು ಇಲ್ಲಎಂದರೆ ಸುಳ್ಳು. ನಿಪಿ--9 ರ ಮ್ಯೂಟೇಷನ್ ಪ್ರಕಾರ ಪ್ರತಿವಾದಿ 2 ಮತ್ತು 3 ರವರ ತಾಯಿ ಸಂಜೀವಮ್ಮ, ರಾಮಲಿಂಗಯ್ಯನ ಹೆಂಡತಿ ಲಿಂಗಮ್ಮ, ಹನುಮಂತಯ್ಯ ಮತ್ತು ಬಸವರಾಜಯ್ಯ ರವರು ಮಾಡಿಕೊಂಡ ವಿಭಾಗದ ಪ್ರಕಾರ ಸಂಜೀವಮ್ಮನ ಹೆಸರಿಗೆ ದಾವಾ ಆಸ್ತಿ ಬಂದಿದೆ ಎಂದರೆ ಸುಳ್ಳು. ನನ್ನ ಮದುವೆ 80 ವರ್ಷ ಆಗಿದೆ. ಸಂಜೀವಮ್ಮ ಹೆಸರಿಗೆ ದಾಖಲೆ ನಮೂದಾದ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ಈಗ ನನಗೆ 70 ವರ್ಷ ವಯಸ್ಸಾಗಿದೆ. ರಾಮಲಿಂಗಯ್ಯ,ಹನುಮಂತಯ್ಯ ಮತ್ತು ಬಸವರಾಜಯ್ಯರವರು ಚನ್ನಮ್ಮನ ಮಕ್ಕಳು ಎಂದರೆ ನಿಜ. ಇವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ.

ಸಂಜೀವಮ್ಮ ತೀರಿಕೊಂಡ ದಿನಾಂಕ ಗೊತ್ತಿಲ್ಲ. ಸಂಜೀವಮ್ಮ ತೀರಿಕೊಳ್ಳುವ ಪೂರ್ವದಲ್ಲಿ ನಿಪಿ-13 ರಂತೆ ವಿಭಾಗ ಆಗಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಭಾಗವಾದ ನಂತರ ನಾನುಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ನಿಜ. ದಾವಾ ಆಸ್ತಿ ಪ್ರತಿವಾದಿ 2 ಮತ್ತು 3 ರವರೆಗೂ ಸೇರಿದ್ದರೂ ನಾನು ಅವರಿಗೆ ತೊಂದರೆ ಕೊಡಲು ಸುಳ್ಳು ದಾವಾ ಆಕಿದ್ದೇನೆ ಎಂದರೆ ಸುಳ್ಳು. ಸಂಬಂಧಿಸಿದ ಇಲಾಖೆಯಿಂದ ಪಡೆದು ವಂಶವೃಕ್ಷವನ್ನು ಹಾಜರುಮಾಡಲು ತೊಂದರೆ ಇಲ್ಲ ಎಂದರೆ ನಿಜ. ನಿಪಿ-1 ವಂಶವೃಕ್ಷವನ್ನು ಸೃಷ್ಟಿ ಮಾಡಿದ್ದೇನೆ ಸುಳ್ಳು. ನಿಪಿ-13 ವಿಭಾಗದ ಪತ್ರದ ಪ್ರಕಾರ ಖಾತಾ ಆಗಿ ಪ್ರತಿವಾದಿ 2 ಮತ್ತು 3 ರವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ಯಾವುದೇ ದಾಖಲೆಯನ್ನು ಹಾಜರುಮಾಡಿದ್ದರೂ ಸುಳ್ಳು ಸಾಕ್ಷಿಯು ಹೇಳುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.